**ಸಾಕ್ಷಿಯನ್ನು ಕರೆಸಲಾಯಿತು** **ಪ್ರಮಾಣ ವಚನ ಮಾಡಿಸಲಾಯಿತು**
**ದಿಃ03.03.2026**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವೈ ಕೆ ವಕೀಲರಿಂದ**

ನಾನು ಕೀಟ ನಾಶಕಗಳ ಮಾರಾಟ ಮತ್ತು ವಿತರಣೆ ವ್ಯವಹಾರವನ್ನು ಮಾಡುತ್ತೇನೆ. ನನ್ನ ಕಂಪನಿಯ ಹೆಸರು ಅಕ್ಷತಾ ಆಗ್ರೋ ವೆಟ್ ಎಜೆನ್ಸೀಸ್ ಎಂದು ಇರುತ್ತದೆ. ಅದು ಬೆಂಗಳೂರು, ಹಾಸನ ಮತ್ತು ಮೈಸೂರಿನಲ್ಲಿ ಇರುತ್ತವೆ. ನಾನು 35 ವರ್ಷಗಳಿಂದ ನೆಡೆಸುತ್ತಿದ್ದೇನೆ. ನಾನು ಆಗಿನಿಂದಲೂ ಆದಾಯ ತೆರಿಗೆ ಪಾವತಿ ಮಾಡುತ್ತಿದ್ದೇನೆ. ಅದನ್ನು ಹೊರತು ಪಡಿಸಿ ನನಗೆ 5 ವರ್ಷಗಳ ಹಿಂದೆ ಕೃಷಿ ಜಮೀನು ಇತ್ತು. ಈಗ ಇರುವುದಿಲ್ಲ. 1 ನೇ ಪ್ರತಿವಾದಿ ನನ್ನ ಸ್ನೇಹಿತರ ಮೂಲಕ 20 ವರ್ಷಗಳ ಹಿಂದೆ ಪರಿಚಯವಾಗಿರುತ್ತಾರೆ. ನನ್ನ ಸ್ನೇಹಿತನ ಹೆಸರು ನೆನಪಿಲ್ಲ. ನನ್ನ ಸ್ನೇಹಿತ ಹೆಬ್ಬನಹಳ್ಳಿ ಗ್ರಾಮದಲ್ಲಿ ಇರುತ್ತಾರೆ. ಈಗ ಅವರ ಸಂಪರ್ಕ ಇರುವುದಿಲ್ಲ. 1 ನೇ ಪ್ರತಿವಾದಿಯ ಜಮೀನನ್ನು ಖರೀದಿ ಮಾಡುವ ಸಲುವಾಗಿ ತನ್ನ ಸ್ನೇಹಿತನಿಂದ ಅವರು ಪರಿಚಯವಾಗಿರುತ್ತಾರೆ. ನನ್ನ ಸ್ನೇಹಿತನಿಗೆ ಅವರ ಊರಿನಲ್ಲಿ ಜಮೀನು ಇರುತ್ತದೆ ಆದರೆ ಯಾವ ಊರು ಎಂದು ನೆನಪಿಲ್ಲ.

ದಾವ ಆಸ್ತಿ ಯಾವ ರೀತಿಯ ಜಮೀನು ಎಂದು ನನಗೆ ಗೊತ್ತಿಲ್ಲ. ಅದು ಒಟ್ಟು 60 ಗುಂಟೆ ಇರುತ್ತದೆ. ಒಟ್ಟು 3 ಎಕರೆ ಜಮೀನು ಇರುತ್ತದೆ. ದಾವ ಆಸ್ತಿಯ ಚೆಕ್ಕುಬಂದಿ ನೆನಪಿಲ್ಲ. ಜಮೀನು ಮಾತುಕತೆ 2008 ರಲ್ಲಿ ನನ್ನ ಎಸ್ಟೇಟ್ ನಲ್ಲಿ ಆಗಿರುತ್ತದೆ. ನನ್ನ ಎಸ್ಟೇಟ್ ಹೆಬ್ಬನಹಳ್ಳಿಯಲ್ಲಿ ಇತ್ತು. ಅದರ ಸರ್ವೆ ನಂಬರ್ ಗೊತ್ತಿಲ್ಲ. ನನಗೆ 7 ಎಕರೆ ಕಾಫಿ ತೋಟ ಇರುತ್ತದೆ. ಮಾತುಕತೆಯಾದಾಗ ನನ್ನ ಸ್ನೇಹಿತ ಮತ್ತು 1 ನೇ ಪ್ರತಿವಾದಿ ಮಾತ್ರ ಇದ್ದರು. ಮಾತುಕತೆಯಲ್ಲಿ 40 ಸಾವಿರಕ್ಕೆ ವ್ಯವಹಾರವಾಗಿರುತ್ತದೆ. ಆ ಸಮಯದಲ್ಲಿ ಯಾವುದೇ ಬರವಣಿಗೆಯಾಗಿರುವುದಿಲ್ಲ. ಆನಂತರ ದಿಃ 31.12.2012 ರಲ್ಲಿ ಸಕಲೇಶಪುರದ ಉಪನೋಂದಾಣಾಧಿಕಾರಿ ಕಚೇರಿಯಲ್ಲಿ ಕರಾರು ಪತ್ರವಾಗಿರುತ್ತದೆ. ಅದಕ್ಕೂ ಪೂರ್ವದಲ್ಲಿ ಯಾವುದೇ ಕರಾರು ಪತ್ರವಾಗಿರುವುದಿಲ್ಲ.

ಕರಾರು ಪತ್ರದಲ್ಲಿ 2 ಲಕ್ಷದ 50 ಸಾವಿರಕ್ಕೆ ತೀರ್ಮಾನವಾಗಿರುತ್ತದೆ. ಆ ಸಮಯದಲ್ಲಿ 1 ಲಕ್ಷ ನಗದು ಮತ್ತು 75 ಸಾವಿರ ಕಾರ್ಪೋರೇಷನ್ ಬ್ಯಾಂಕ್ ಚೆಕ್ ನೀಡಿರುತ್ತೇನೆ. 1 ನೇ ಪ್ರತಿವಾದಿಯ ಹೆಸರಿಗೆ ಚೆಕ್ ನೀಡಿರುತ್ತೇನೆ. ಕರಾರು ಪತ್ರದ ದಿನ 1 ನೇ ಪ್ರತಿವಾದಿ ಮತ್ತು ಅವರ ಕುಟುಂಬದ 5 ಜನರು ಬಂದಿದ್ದರು. ಸದರಿ 1 ಲಕ್ಷದ 75 ಸಾವಿರ ಹಣವನ್ನು ಆದಾಯ

ತೆರಿಗೆಯಲ್ಲಿ ತೋರಿಸಿರುವುದಿಲ್ಲ. 20 ಸಾವಿರ ಹಣ ಮೇಲ್ಪಟ್ಟು ಬ್ಯಾಂಕ್ ರೂಪದಲ್ಲಿ ವ್ಯವಹಾರಿಸಬೇಕೆಂದರೆ ಆಗ ಆ ನಿಯಮ ಇರಲಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನಾನು ಮತ್ತು ರಾಜೇಂದ್ರ ರವರು ಕಾರ್ಪೋರೇಷನ್ ಬ್ಯಾಂಕ್ ನಲ್ಲಿ ಜಂಟಿ ಖಾತೆ ಮಾಡಿದ್ದು ಸದರಿ ಖಾತೆಯಿಂದ ಹಣ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ರಾಜೇಂದ್ರ ರವರು ನನ್ನ ಎಸ್ಟೇಟ್ ಖರೀದಿಯ ಪಾಲುದಾರರಾಗಿರುತ್ತಾರೆ. ಅದನ್ನು ತೋರಿಸಲು ಪಾಲುದಾರಿಗೆ ಕರಾರು ಪತ್ರ ಹಾಜರುಪಡಿಸಿಲ್ಲ. ಜಂಟಿ ಖಾತೆಯ ಅಕೌಂಟ್ ಸ್ಟೇಟ್ ಮೆಂಟ್ ತೋರಿಸಿಲ್ಲ.

ನಾನು ಮತ್ತು ರಾಜೇಂದ್ರ ರವರು ತಲಾ 30 ಗುಂಟೆಯಂತೆ ಪ್ರತ್ಯೇಕವಾಗಿ ಕರಾರು ಮಾಡಿಕೊಂಡಿರುತ್ತೇವೆ. ಸದರಿ ವಿಚಾರ ದಾವೆಯಲ್ಲಿ ತಿಳಿಸಿರುವುದಿಲ್ಲ. ದಿಃ 31.12.2012 ರ ಕರಾರು ಪತ್ರದಲ್ಲಿ ಎಷ್ಟು ದಿನಗಳೊಳಗಾಗಿ ಕ್ರಯ ಪತ್ರ ಮಾಡಿಕೊಳ್ಳಬೇಕೆಂದು ನೆನಪಿಲ್ಲ. ಕರಾರು ಪತ್ರದಲ್ಲಿ ಉಳಿಕೆ ಹಣ ಎಷ್ಟು ಕೊಡಬೇಕು ಎಂದು ನಮೂದು ಮಾಡಿಲ್ಲ. ಕರಾರು ಪತ್ರ ಆದನಂತರ 1 ನೇ ಪ್ರತಿವಾದಿಯನ್ನು 10-12 ಬಾರಿ ಹೋಗಿ ಕೇಳಿರುತ್ತೇನೆ. ಲಿಖಿತವಾಗಿ ನೋಟೀಸ್ ಸಹ ಕಳುಹಿಸಿರುತ್ತೇನೆ. 6 ವರ್ಷ ತಡವಾಗಿ ದಾವೆ ಹೂಡಿರುವ ಬಗ್ಗೆ ಕಾರಣ ತಿಳಿಸಿರುತ್ತೇನೆ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**